## ರಾಕ್‌ಸ್ಟಾರ್ ರೆಡಿ

'ರಾಕ್‌ಸ್ಟಾರ್' ಬಿಡುಗಡೆಯ ಹೊಸ್ತಿಲಲ್ಲಿದೆ. ರಣಬೀರ್ ಸಖತ್ ಮಿಂಚುತ್ತಿದ್ದಾನೆ. ಇಮ್ತಿಯಾಜ್ ಅಲಿ ನಿರ್ದೇಶನದ ಈ ಚಿತ್ರ ಖಂಡಿತಾ ಬಾಕ್ಸಾಫೀಸ್‌ನಲ್ಲಿ ಗೆಲ್ಲುತ್ತದೆ ಎನ್ನುವುದು ರಣಬೀರ್ ಅಭಿಮಾನಿಗಳ ನಿರೀಕ್ಷೆ. ಈ ಚಿತ್ರ ಹಿಟ್ ಆಗುವುದು ರಣಬೀರ್‌ಗೂ ಅಗತ್ಯವಿದೆ. ಈವರೆಗಿನ ಹಿಟ್ ಮತ್ತು ಫ್ಲಾಪ್‌ಗಳು ಏನೇ ಇದ್ದರೂ, ರಣಬೀರ್ ಚಾಕಲೇಟ್ ಹೀರೊ ಲೆವೆಲ್‌ನಿಂದ ಇನ್ನೂ ಮೇಲಕ್ಕೇರಿಲ್ಲ. ಮುಖ್ಯವಾಗಿ ಆ್ಯಕ್ಷನ್ ಚಿತ್ರಗಳೇ ವಿಜೃಂಭಿಸುತ್ತಿರುವ ಬಾಲಿವುಡ್‌ನಲ್ಲಿ ಸಲ್ಮಾನ್, ಶಾರೂಕ್, ಅಜಯ್ ಮುಂತಾದ ಪಂಟರ್‌ಗಳ ಮಧ್ಯೆ ರಣಬೀರ್ ಚಿತ್ರಗಳ ಆರಂಭಿಕ ಕಲೆಕ್ಷನ್ ಏನೇನೂ ಅಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ.

ಆದರೆ ರಣಬೀರ್ ಚಿತ್ರಗಳೆಂದರೆ ಕಾಲೇಜು ಹುಡುಗಿಯರ ನೂಕುನುಗ್ಗಲು ಇರುತ್ತದೆ ಎನ್ನುವುದೂ ನಿಜವೇ. 'ಬ್ಯಾಚುಲರ್ ಮತ್ತು ಸುರಸುಂದರಾಂಗ' ಎನ್ನುವುದೇ ಸದ್ಯಕ್ಕೆ ಈ ಆಕರ್ಷಣೆಗೆ ಕಾರಣ. ಕಳೆದ ವಾರ ದುಬೈನಲ್ಲಿ ರಾಕ್‌ಸ್ಟಾರ್ ಚಿತ್ರದ ಪ್ರಮೋಶನ್ ಸಮಾರಂಭದಲ್ಲೂ ಮುತ್ತಿಗೆ ಹಾಕಿದ್ದು ಹದಿಹರೆಯದ ಕನ್ಯೆಯರೇ. ನೂರಾರು ಸುಂದರಿಯರು ರಣಬೀರ್‌ನನ್ನು ಕಣ್ತುಂಬಿಕೊಳ್ಳಲು ಅಲ್ಲಿ ಕಾದಿದ್ದರು. ಆದರೆ ರಣಬೀರ್ ಕೇವಲ ಐದೇ ನಿಮಿಷಗಳಲ್ಲಿ ಎಲ್ಲ ಅಭಿಮಾನಿಗಳಿಗೂ ಕೈ ಬೀಸಿ ಕಾರು ಹತ್ತಿದ್ದು ಮಾತ್ರ ಎಲ್ಲರಿಗೂ ನಿರಾಶೆ ತಂದಿದೆಯಂತೆ.

ಈ ಸುದ್ದಿ ಓದುವಷ್ಟರಲ್ಲಿ ರಾಕ್‌ಸ್ಟಾರ್ ನ ಬಾಕ್ಸಾಫೀಸ್ ಹಣೆಬರಹ ಏನೆಂದು ಗೊತ್ತಾಗಿರುತ್ತದೆ. ಈ ಹಿಂದೆ ಮಿಥುನ್ ಚಕ್ರವರ್ತಿಯನ್ನು ಡ್ಯಾನ್ಸ್ ಕಿಂಗ್ ಮಾಡಿದಂತೆ ರಾಕ್‌ಸ್ಟಾರ್ ಚಿತ್ರ ರಣಬೀರ್‌ಗೆ ಅದೃಷ್ಟ ತಂದು ಕೊಡುವುದೆ ಎನ್ನುವುದು ಮೊದಲ ವಾರದ ನಂತರ ಗೊತ್ತಾಗುತ್ತದೆ.

ರಣಬೀರ್‌ನ ಹಣೆಬರಹ ಏನೇ ಇರಲಿ, ಚಿತ್ರದ ಹೀರೋಯಿನ್ ನರ್ಗಿಸ್ ಫಕ್ರು ಮಾತ್ರ ಥ್ರಿಲ್ ಆಗಿದ್ದಾಳೆ. ಚಿತ್ರದಲ್ಲಿ ಈ ಮಾದಕ ಚೆಲುವೆಯ ಸೌಂದರ್ಯ ಪ್ರೇಕ್ಷಕರಿಗೆ ಶಾಕ್ ಹುಟ್ಟಿಸುವಂತೆ ಬಿಚ್ಚಿಕೊಂಡಿದೆಯಂತೆ. ಚಿತ್ರ ಗೆದ್ದರೂ, ಸೋತರೂ ನರ್ಗಿಸ್‌ಗೆ ಅವಕಾಶಗಳ ಬಾಗಿಲು ತೆರೆದಂತೆಯೇ. ಈ ಚೆಲುವೆಯ ಬಾಲಿವುಡ್ ಆರಂಗೇಟ್ರಂ ಆಗುವ ಮುನ್ನವೇ ನಾಲ್ಕೈದು ನಿರ್ಮಾಪಕರು ಈಕೆಯ ಕಾಲ್‌ಷೀಟ್‌ಗೆ ದುಂಬಾಲು ಬಿದ್ದಿದ್ದಾರಂತೆ.





## ಮತ್ತೆ ಬಿಪಾಸಾ

'ಪ್ಲೇಯರ್ಸ್' ಎಂಬ ಹೊಸ ಚಿತ್ರದ ಬಿಡುಗಡೆ ಆಗಲಿರುವುದು ಜನವರಿಯಲ್ಲಿ. ಆದರೆ ಕಳೆದ ವಾರ ಬಿಡುಗಡೆಯಾದ ಚಿತ್ರದ ಮೊದಲ ಪ್ರಮೋ ಈಗಾಗಲೆ ಬಾಲಿವುಡ್‌ನಲ್ಲಿ ಕುತೂಹಲದ ಕಿಚ್ಚು ಹತ್ತಿಸಿದೆ. ಅದರಲ್ಲೂ ಚಿತ್ರದಲ್ಲಿ ಬಿಪಾಸಾ ಬಸು ಕೆಂಪು ಬಣ್ಣದ ಬಿಕಿನಿಯಲ್ಲಿ ಕಾಣಿಸಿಕೊಂಡಿರುವುದು ಈ ಕಿಚ್ಚನ್ನು ಕಾಳ್ಗಿಚ್ಚಾಗಿಸಿದೆ. ಮೊದಲ ಪ್ರಮೋ ನೋಡಿದ ನಿರ್ದೇಶಕ ರಾಮ್‌ಗೋಪಾಲ್ ವರ್ಮಾ ಅಂತೂ ತನ್ನ ಬ್ಲಾಗ್‌ನಲ್ಲಿ 'ಬಿಪಾಸಾ ಹಾಟ್' ಬಗ್ಗೆ ಮತ್ಸರದ ಮೆಚ್ಚುಗೆ ವ್ಯಕ್ತಪಡಿಸಿದ್ದಾನೆ.

ಹಾಗೆ ನೋಡಿದರೆ ಈ ಚಿತ್ರ ಹಾಲಿವುಡ್‌ನ ಯಶಸ್ವಿ ಚಿತ್ರವಾದ 'ದಿ ಇಟಾಲಿಯನ್ ಜಾಬ್'ನ ರಿಮೇಕ್. ಈ ಥ್ರಿಲ್ಲರ್ ಚಿತ್ರದಲ್ಲಿ ಅಭಿಷೇಕ್ ಬಚ್ಚನ್, ಬಾಬ್ಬಿ ಡಿಯೋಲ್, ನೀಲ್ ನಿತಿನ್ ಮುಖೇಶ್ ಮುಂತಾದ ಭರ್ಜರಿ ತಾರಾಗಣವಿದ್ದರೂ ಎಲ್ಲರೂ ಬಿಪಾಸಾ ಬಗ್ಗೆಯೇ ಮಾತನಾಡುತ್ತಿದ್ದಾರಂತೆ.

ಜಾನ್ ಅಬ್ರಹಾಂನ ಗೆಳೆತನಕ್ಕೆ ಟಾಟಾ ಹೇಳಿದ ಬಳಿಕ ಬಿಪಾಸಾ ಇನ್ನಷ್ಟು ಬಿಡುಬೀಸಾಗಿದ್ದಾಳೆ. ಈಗಾಗಲೆ ಕಾರು ಡ್ರೈವಿಂಗ್ ಕಲಿತುಕೊಂಡಿರುವ ಆಕೆ ಹೊಸ ಬೀಟಲ್ ಖರೀದಿಸಿದ್ದೂ ಆಗಿದೆ. 'ನನ್ನ ಕೆಲಸಗಳಿಗೆ ಇನ್ನೊಬ್ಬರನ್ನು ಅವಲಂಬಿಸುವುದು ನನಗೆ ಸರಿ ಕಾಣುವುದಿಲ್ಲ, ಅದಕ್ಕೇ ಡ್ರೈವಿಂಗ್ ಕಲಿತೆ' ಎಂದು ಒಂದು ಸಂದರ್ಶನದಲ್ಲಿ ಹೇಳಿರುವ ಆಕೆ, ಆ ಕಾರಿಗೆ 'ಬ್ರಾಡ್' ಎಂದು ಹೆಸರಿಟ್ಟಿರುವುದರ ಗುಟ್ಟನ್ನು ಮಾತ್ರ ಬಿಟ್ಟುಕೊಟ್ಟಿಲ್ಲ. ಅದು ಹಾಲಿವುಡ್ ಸ್ಟಾರ್ ಬ್ರಾಡ್‌ಪಿಟ್‌ನ ಮೇಲಿನ ಪ್ರೀತಿ ಎಂದೀಗಾಗಲೆ ಸುದ್ದಿ ಹಬ್ಬಿದೆ. ಆದರೆ ಬಿಂದಾಸ್ ಬಿಪಾಸಾ ಮಾತ್ರ ಯಾವ ಗಾಳಿಸುದ್ದಿಗೂ ಕ್ಯಾರೆ ಅನ್ನದೆ ಹೊಸ ಕಾರಿನಲ್ಲಿ ಮುಂಬೈ ತುಂಬ ಸುತ್ತಾಡುತ್ತಿದ್ದಾಳಂತೆ!

■ ಬಿಂದು